2-00 P.M.

Calling Attention to a Matter of Urgent Public Importance *re* : Closure of Bhadigunda Mines.

Sri ABDUL KHUDDUS ANWAR (Bhadravathi).—I had given notice of Call Attention with regard to the closure of Bhadigunda Mines. Now that the matter has been decided by the Government, I do not like to press it. I thank the Government for having given to the workers a sum of Rs. 35,000 as *ex-gratia* payment.

Motion of Thanks to the Governor's Address

(*Debate Continued*)

Sri BAPURAO PATIL (Aurad).—(*Hindi*)

†ಶ್ರೀಮತಿ ಮನೋರಮಾ ಮಧ್ವರಾಜ್ (ಉಡುಪಿ).—ಮಾನ್ಯ ಸಭಾಪತಿಗಳೇ, ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ಒಂದೆರಡು ವಿಷಯಗಳನ್ನು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ನಾನು ಪ್ರಪ್ರಥಮವಾಗಿ ತಮಗೆ ನನ್ನ ವಂದನೆಗಳನ್ನು ಸಲ್ಲಿಸುತ್ತೇನೆ. ಮಾನ್ಯ ರಾಜ್ಯಪಾಲರ ಭಾಷಣದ ಅನೇಕ ವಿಷಯಗಳ ಹಾಗೂ ಸಮಸ್ಯೆಗಳ ಮೇಲೆ ಮಾತನಾಡುವ ಇಚ್ಛೆ ಇದ್ದರೂ ನಾನು ಮೀನುಗಾರರ ಸಮಾಜಕ್ಕೆ ಸೇರಿದವಳಾಗಿದ್ದರಿಂದ, ಮೀನುಗಾರರ ಹಾಗೂ ಮೀನುಗಾರಿಕೆ ಉದ್ಯಮದಲ್ಲಿ ಸ್ವಲ್ಪ ಮಟ್ಟಿಗೆ ಪರಿಜ್ಞಾನ ಉಳ್ಳವಳಾಗಿದ್ದರಿಂದ ಈ ಮೀನುಗಾರಿಕೆ ಬಗ್ಗೆ ಒಂದೆರಡು ಮಾತನಾಡಲು ಇಚ್ಛಿಸುತ್ತೇನೆ. ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಮೀನುಗಾರಿಕೆಯ ಸರ್ವತೋಮುಖವಾದ ಅಭಿವೃದ್ಧಿಗೆ ಒಂದು ಯೋಜನೆಯನ್ನು ಸಿದ್ಧಪಡಿಸಲಿದ್ದು ಮುಂದಿನ ವರ್ಷದಲ್ಲಿ ಅದನ್ನು ಕಾರ್ಯಗತ ಮಾಡುವ ಆಶ್ವಾಸನೆ ಕೊಟ್ಟಿದ್ದಕ್ಕಾಗಿ ನಾನು ಮೀನುಗಾರರ ಸಮಾಜದ ಪರವಾಗಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ನಮ್ಮ ಮೈಸೂರು ರಾಜ್ಯ ಕರಾವಳಿಯಲ್ಲಿ ಹೆಚ್ಚು ಕಡಿಮೆ ಒಂದು ಸಾವಿರ ಸಣ್ಣ ಯಾಂತ್ರಿಕ ದೋಣಿಗಳಿದ್ದು, ಅವುಗಳು ಬರೀ ಏಳು ಮೈಲಿ ದೂರಕ್ಕೆ ಹೋಗಿ ಮೀನು ಹಿಡಿಯುವುದಕ್ಕೆ ಸಾಧ್ಯವಿತ್ತು. ಅದರಲ್ಲೂ ಈಗ್ಗೆ ಎರಡು ವರ್ಷಗಳಿಂದ ನಾವು ವಿದೇಶಿ ವಿನಿಮಯ ಗಳಿಸುತ್ತಿರುವ 'ಸಿಗಡಿ ಮೀನಿನ' ಕೊರತೆಯಿಂದಾಗಿ ಬಡ ಮೀನುಗಾರರು ಬಹಳ ಸಂಕಷ್ಟದಲ್ಲಿದ್ದಾರೆ. ಆ ದೋಣಿಗಳ ಮೇಲೆ ಅವರು ಬ್ಯಾಂಕುಗಳಿಂದ ಮತ್ತೆ ಸಹಕಾರ ಸಂಘಗಳಿಂದ ಸಾಲ ಪಡೆದುಕೊಂಡಿರುವುದರಿಂದ ಅದರ ಅಸಲು ಕಟ್ಟುವುದು ಬಿಟ್ಟು ಬಡ್ಡಿ ಕಟ್ಟುವುದಕ್ಕೂ ಕೂಡ ಅವರಿಂದ ಸಾಧ್ಯವಾಗಿಲ್ಲ. ಹೀಗಾಗಿ, ಈ ವಿಚಾರದಲ್ಲಿ ಸರ್ಕಾರದವರು ಅವರಿಗೆ ಸ್ವಲ್ಪ ಪರಿಹಾರ ಧನವನ್ನು ಕೊಡಬೇಕಾಗಿ ನಾನು ಮಾನ್ಯ ಸರ್ಕಾರದವರಲ್ಲಿ ತಮ್ಮ ಮುಖಾಂತರ ವಿನಂತಿಸಿಕೊಳ್ಳುತ್ತೇನೆ. ನಮ್ಮ ಮಾನ್ಯ ರಾಜ್ಯಪಾಲರು 370 ಮೀಡಿಯಂ ಹಾಗೂ ದೊಡ್ಡ ಗಾತ್ರದ ಮೀನು ಹಿಡಿಯುವ ದೋಣಿಗಳನ್ನು ಹಂತ ಹಂತದಲ್ಲಿ ಕೊಡಿಸುವ ಯೋಜನೆಯನ್ನೂ ಕೂಡ ಇಟ್ಟಿದ್ದಾರೆ. ಆದರೆ ಯಾವುದಕ್ಕೂ ಮುಖ್ಯವಾಗಿ ನಮ್ಮ ಮೀನುಗಾರರಿಗೆ ಬಂದರು ಇಲ್ಲದೆ ಯಾವ ದೊಡ್ಡ ಗಾತ್ರದ ಅಥವಾ ಮಿಡಿಯಮ್ ಗಾತ್ರದ ದೋಣಿ ತಯಾರಿಸಿ ಪುದರಲ್ಲಿ ಪ್ರಯೋಜನ ಇರಲಿಕ್ಕಿಲ್ಲ. ಸಣ್ಣ ಪುಟ್ಟ ರಿಪೇರಿಗಾಗಿ ಗೋವೆ, ಕೊಚ್ಚಿ, ಬೊಂಬಾಯಿ ಮುಂತಾದ ಕಡೆಗೆ ಕಳುಹಿಸಬೇಕಾಗುತ್ತದೆ. ಅದು ಕಷ್ಟಸಾಧ್ಯ. ಮಲ್ಪೆಯಲ್ಲಿ ಎರಡು ಸಾರಿ ಫೌಂಡೇಷನ್ ಸ್ಟೋನ್ ಹಾಕಿ ಮೀನಿನ ಅಭಿವೃದ್ಧಿಗೆ ಯಾವ ಸಹಾಯವೂ ಆಗಲಿಲ್ಲ. ಹಿಂದಿನ ಸರ್ಕಾರ ಯಾವ ರೀತಿ ಮಾಡಿದರು ಆ ರೀತಿ ಈಗಿನ ಸರ್ಕಾರ ಮಾಡದೆ ಈ ವಿಚಾರದಲ್ಲಿ ಶೀಘ್ರವಾಗಿ ಗಮನ ಹರಿಸಿ ನಮಗೆ ಕನಿಷ್ಟ ಮೂರು ಮೀನುಗಾರಿಕೆ ಬಂದರುಗಳನ್ನಾದರೂ ರಚಿಸಿದರೆ ತುಂಬಾ ಉಪಕಾರವಾಗುತ್ತದೆ. ರಾಜ್ಯದಲ್ಲಿ 19 ನೈಸರ್ಗಿಕ ರೇವ್ಗಳಿರುವುದರಿಂದ ಕನಿಷ್ಠ 3—4 ನ್ನಾದರೂ ಮೀನುಗಾರಿಕೆ ಬಂದರುಗಳನ್ನಾಗಿ ಬದಲಾಯಿಸಬೇಕು ಎಂದು ಕಳಕಳಿಯಿಂದ ವಿನಂತಿಮಾಡಿಕೊಳ್ಳುತ್ತೇನೆ.

ಇನ್ನು ತಜ್ಞ ಅಧಿಕಾರಿಗಳ ಬ್ರೇನ್ ವೇವ್ಸ್ ಪ್ರಕಾರ ಈ ವಿದೇಶ ವಿನಿಮಯ ಗಳಿಸುವ ಸಿಗಡಿ ಮೀನು, ಮೀನುಜಾತಿಗೆ ಸೇರುವುದಿಲ್ಲ ಎಂದು ಹೇಳಿ ಮೂರು ಪರ್ಸೆಂಟ್ ಸೇಲ್ಸ್ ಟ್ಯಾಕ್ಸ್ ಹಾಕಿ